Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಲಿಂಗಸುಗೂರು

ಸಿ.ಸಿ.ನಂ. 714/2023

ಸಿ.ಡಬ್ಲೂ-09

ಪಿ.ಡಬ್ಲೂ-07

ಸಾಕ್ಷಿದಾರರ ಹೆಸರು :- ಡಾ.ದಿಗಂಬರ್

ತಂದೆಯ ಹೆಸರು :- ಭಗಂವತಪ್ಪ

ವಯಸ್ಸು :- 54 ವರ್ಷ

ಉದ್ಯೋಗ :- ವೈದ್ಯರು, ಸರ್ಕಾರಿ ಆಸ್ಪತ್ರೆ ಮುದ್ದೇಬಿಹಾಳ

ವಾಸಸ್ಥಳ :- ಮುದ್ದೇಬಿಹಾಳ

ದಿನಾಂಕ 12-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನಾನು 2005 ರಿಂದ ಜುಲೈ-2025 ವೈದ್ಯಾಧಿಕಾರಿಯಾಗಿ ಲಿಂಗಸುಗೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿನಾಂಕ 11-06-2023 ರಂದು ಬೆಳಿಗ್ಗೆ 11-10 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ ಚಾ.ಸಾ-1 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನನ್ನ ಮುಂದೆ ಹಾಜರಾಗಿದ್ದರು. ನಾನು ಅವರನ್ನು ಪರೀಕ್ಷಿಸಿರುತ್ತೇನೆ.

2. ಚಾ.ಸಾ-1 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಹೊಟ್ಟೆಯ ಮೇಲೆ ನೋವು ಕಂಡು ಬಂದಿರುತ್ತದೆ. ಈ ಕುರಿತು ಸಾದಾ ಸ್ವರೂಪದ ಗಾಯ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

3. ಚಾ.ಸಾ-4 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಬಲಗಡೆ ಕುತ್ತಿಗೆಯ ಮೇಲೆ 2 * 3 ಸೆ.ಮಿ ನ ತೆರಚಿದ ಗಾಯ ಕಂಡು ಬಂದಿರುತ್ತದೆ. ಈ ಕುರಿತು ಸಾದಾ ಸ್ವರೂಪದ

ಗಾಯ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

4. ಚಾ.ಸಾ-5 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಎದೆಯ ಮೇಲೆ ಒಳಪೆಟ್ಟು ಕಂಡು ಬಂದಿರುತ್ತದೆ. ಈ ಕುರಿತು ಸಾದಾ ಸ್ವರೂಪದ ಗಾಯ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ-5 ರಿಂದ 7 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ-5(ಎ), ನಿ.ಪಿ-6(ಎ), ಮತ್ತು ನಿ.ಪಿ-7(ಎ) ಎಂದು ಗುರುತಿಸಲಾಯಿತು. ಸದರಿ ಕೈಯಿಂದ, ಕಟ್ಟಿಗೆಯಿಂದ ಮತ್ತು ಕಬ್ಬಿಣದ ರಾಡಿನಿಂದ ಹೊಡೆದರೆ ಆಗುವ ಸಾದ್ಯತೆ ಇದೆ.

**<u>ಪಾಟೀ ಸವಾಲು ಶ್ರೀ. ಎಸ್.ಆರ್.ಆರ್ ವಕೀಲರಿಂದ :-</u>**

ಚಾ.ಸಾ-1 ರವರ ಹೊಟ್ಟೆಯ ಯಾವ ಭಾಗದಲ್ಲಿ ನೋವು ಕಾಣಿಸಿಕೊಂಡಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಹೊಟ್ಟೆಯ ಮೇಲೆ ಯಾವ ಗಾಯಗಳು ಇರಲಿಲ್ಲ. ಒಬ್ಬ ವ್ಯಕ್ತಿ ಸಾಮಾನ್ಯವಾಗಿ ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದರೆ ನಿ.ಪಿ-5 ರಿಂದ 7 ರಲ್ಲಿರುವ ಗಾಯಗಳು ಆಗುವ ಸಾದ್ಯತೆ ಇದೆ ಎಂದರೆ ಸರಿ. ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯದ ವಯಸ್ಸನ್ನು ನಮೂದಿಸಿಲ್ಲ ಎಂದರೆ ಸರಿ. ಚಾ.ಸಾ-5 ರವರಿಗೆ ಎದೆಯ ಯಾವ ಭಾಗದಲ್ಲಿ ಒಳಪೆಟ್ಟು ಆಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಾನು ಚಾ.ಸಾ-1, 4 ಮತ್ತು 5 ರವರಿಗೆ ಯಾವುದೇ ತಪಾಸಣೆ ಮಾಡಿಲ್ಲ ಪೋಲಿಸರ ಕೋರಿಕೆಯ ಮೇರೆಗೆ ನಾನು ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :-** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,
ಲಿಂಗಸುಗೂರು.